


### ಸರ್ಕಾರ ಪ್ರೋತ್ಸಾಹಿಸಲಿ

‘ಕರೆಂಟು ಮಾರಿ ಕಾಸು ಗಳಿಸಿ’, ಮಂಜುನಾಥ್ ಹೆಬ್ಬಾರ್ ಅವರ ಮುಖಪುಟ ಲೇಖನ (ಸುಧಾ, ಆ.27) ಓದಿ ಸಂತಸವಾಯಿತು. ಕರ್ನಾಟಕದ ಜನತೆ ವಿದ್ಯುತ್ ಸ್ವಾವಲಂಬಿಗಳಾಗುತ್ತಿರುವುದು ಆಶಾದಾಯಕ. ಮಧ್ಯಮ ವರ್ಗದವರೂ ವಿದ್ಯುತ್ ಉತ್ಪಾದಿಸುವಂತೆ ಸರ್ಕಾರ ಸಹಾಯಧನ ನೀಡಿ ಪ್ರೋತ್ಸಾಹಿಸಬೇಕು.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ, ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ, ಮಹಾವೀರ ಕಾಸರ, ಶಿವಮೊಗ್ಗ, ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

### ಆರೋಗ್ಯಕ್ಕೆ ತೊಂದರೆಯಿದೆಯೇ?

ಮನೆಯ ಮೇಲೆ ಸೌರವಿದ್ಯುತ್ ಫಲಕಗಳನ್ನು ಹಾಕುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆಯೇ ಎಂಬ ಸಂದೇಹವಿದೆ. ಏಕೆಂದರೆ ಮೊಬೈಲ್ ಟವರ್‌ಗಳನ್ನು ಮನೆಯ ಮೇಲೆ ಹಾಕಿಸಿದರೆ ಅದರಿಂದ ಆರೋಗ್ಯಕ್ಕೆ ಹಾನಿಯಿದೆ ಎಂಬುದನ್ನು ನಾನು ಬಲ್ಲೆ.

–ರಘುನಾಥರಾವ್ ತಾಪ್ಸೆ, ದಾವಣಗೆರೆ

### ಮಾರ್ಮಿಕ ಬರಹ

‘ನಿಮ್ಮೊಡನೆ’ಯಲ್ಲಿ ‘ಕಲೆ ವ್ಯಾಪಾರದ ಜಿಜ್ಞಾಸೆ’ ಬರಹ (ರಘುನಾಥ ಚ.ಹ.) ಮಾರ್ಮಿಕವಾಗಿತ್ತು. ಡಬ್ಬಿಂಗ್ ಕುರಿತು ಡಾ. ರಾಜ್ ಮಾತುಗಳನ್ನು ಉದಾಹರಿಸಿರುವುದು ಮೌಲಿಕವಾಗಿದೆ.

– ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ, ಎಚ್.ಆನಂದಕುಮಾರ್, ಚಿತ್ರದುರ್ಗ, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ಪಿತ್ತಜನಕಾಂಗ ಕಸಿ

‘ಪಿತ್ತಜನಕಾಂಗ ಕಸಿ; ಮಕ್ಕಳಿಗೆ ವರದಾನ’, ಆರೋಗ್ಯ ಲೇಖನ (ಉಮಾ ಅನಂತ್) ನೈಜ ಉದಾಹರಣೆಗಳನ್ನು ಒಳಗೊಂಡಿದ್ದು, ಈ ಸಮಸ್ಯೆಯ ಮೇಲೆ ಬೆಳಕು ಚೆಲ್ಲಿದೆ.

–ಎಂ.ಆರ್. ಶರ್ಮಿಳಾ ಮಂಜುನಾಥ, ತೀರ್ಥಹಳ್ಳಿ

### ತಗಲುವ ವೆಚ್ಚ

ಪಿತ್ತಜನಕಾಂಗ ಕಸಿಯಿಂದ ಮಕ್ಕಳ ಸಮಸ್ಯೆ ನಿವಾರಣೆಯಾಗುತ್ತದೆ. ಇದು ವೈದ್ಯಲೋಕದ ಅಚ್ಚರಿಯೇ ಸರಿ. ಆದರೆ ಇದಕ್ಕೆ ತಗಲುವ ವೆಚ್ಚ ತಿಳಿದಾಗ ಸಾಮಾನ್ಯ ಜನರ ಪಿತ್ತ ಜರ್‍ರನೆ ಇಳಿಯಬಹುದು!

– ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ

### ಉತ್ತಮ ನಿರೂಪಣೆ

‘ಹೌಸ್ ಎಕ್ಸ್‌ಟೆನ್‌ಶನ್’, ಪಾರ್ವತಿ ಪಿಟಗಿ ಅವರ ಕಥೆಯ ನಿರೂಪಣೆ ಸೊಗಸಾಗಿದೆ.

–ನೇ.ಗೋ.ಭ. ಕುಕ್ಕೆ ಸುಬ್ರಹ್ಮಣ್ಯ

### ಅರ್ಥಪೂರ್ಣ

‘ಅಳಬೇಕು ತಂಗಿ ಅಳಬೇಕು..’ (ಡಾ.ಕೆ.ಆರ್. ಮಲ್ಲಿಕಾರ್ಜುನಸ್ವಾಮಿ) ಅವರ ಮನೋವೈಜ್ಞಾನಿಕ ಲೇಖನ ಅರ್ಥಪೂರ್ಣವಾಗಿದೆ.

–ವೈ.ಜಿ. ನರಸಿಂಹನ್, ಶಿವಮೊಗ್ಗ

### ಪ್ರವಾಸಿಗರಿಗೆ ದಿಕ್ಸೂಚಿ

‘ಸರೋವರಗಳ ನಗರಿಯಲ್ಲಿ’, ಸಚಿತ್ರ ಪ್ರವಾಸ ಲೇಖನ (ವಸುಮತಿ ಉಡುಪ) ಚೆನ್ನಾಗಿದೆ. ಪ್ರವಾಸಿಗರಿಗೆ ಒಂದು ಉತ್ತಮ ದಿಕ್ಸೂಚಿಯಂತಿದೆ.

–ಕೊಹಿಮ ಬಸರಕೋಡು

ಉದಯಪುರ ಸರೋವರಗಳ ನಗರಿ ಎಂದೇ ಹೆಸರು ಪಡೆದಿರುವುದು ತಿಳಿದು ಅಚ್ಚರಿಯಾಯಿತು.

–ನಾರಾಯಣ ಯಾಜಿ ಶಿರಾಲಿ

### ಸಿಂಹಗಳ ನಿದ್ರಾಯಣ

ಸಿಂಹಗಳು ಮರದ ಮೇಲೆ ಸಹ ಮಲಗಬಲ್ಲವು ಎಂಬುದನ್ನು ವಂಡರ್ ಪುಟದಲ್ಲಿ (ಅವನೀಶ್) ನೋಡಿ ಆಶ್ಚರ್ಯವಾಯಿತು.

–ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಮಹೇಶ್ ಎಸ್.ಎಚ್. ಕೊಟ್ಟೂರು ಸುಂದರ್, ಬೆಂಗಳೂರು



ಕೂದಲು ಉದುರುತ್ತಿದೆಯೇ?
ಚಿಂತಿಸಬೇಕಾದ ಅಗತ್ಯವಿಲ್ಲ..




ಬೈದ್ಯನಾಥ್
ಮಹಾಭೃಂಗರಾಜ್
ತೈಲ
14 ಗಿಡಮೂಲಿಕೆಗಳ
ಪೌಷ್ಠಿಕಾಂಶಗಳಿಂದ ಸಮೃದ್ಧವಾಗಿದ್ದು
ಇದು ಒಳಗಿನಿಂದಲೇ
ನೆತ್ತಿಯನ್ನು ತಲುಪಿ
ಕೂದಲ ಬೇರುಗಳನ್ನು
ಸದೃಢಗೊಳಿಸುವುದು.
ರಾಸಾಯನಿಕಗಳಿಲ್ಲ!
ಕೃತಕ ಸುವಾಸನೆಯಿಲ್ಲ!
ಪರಿಶುದ್ಧ ಭೃಂಗರಾಜ್ ಮಾತ್ರ!!
Doctor's consultation at Baidyanath Clinic, Nagpur (0712) 2551553/2440020